**OS-86/2014**
**DW-7**

**ಇಂದು ದಿಃ27-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ನಾನು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಯಿಸಿದ ಎಲ್ಲಾ ವಿಷಯಗಳೆಲ್ಲವು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.**

ಮುಖ್ಯ ವಿಚಾರಣೆ **8** ಮತ್ತು **9** ನೇ ಪ್ರತಿವಾದಿಯರ ಪರ ಶ್ರೀ ಬಿ.ಎಸ್ ವಕೀಲರಿಂದಃ

ನಾನು 9 ನೇ ಪ್ರತಿವಾದಿಯರ ಪರವಾಗಿಯೂ ಸಹ ನಾನೇ ಸಾಕ್ಷಿ ಹೇಳುತ್ತಿದ್ದೇನೆ. 1, 8 ಮತ್ತು 9 ನೇ ಪ್ರತಿವಾದಿಯರು ನಿ.ಡಿ-7 ವಿಭಾಗ ಪತ್ರದ ಪ್ರಕಾರ ವಿಭಾಗ ಮಾಡಿಕೊಂಡಿದ್ದೇವೆ. ನಾನು ನನ್ನ ತಾಯಿಯ ಪರವಾಗಿ ನಿ.ಡಿ-3 ರಂತೆ ದಾನ ಪತ್ರವನ್ನು ಬರೆದುಕೊಟ್ಟಿದ್ದೇನೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಎಲ್ಲಾ ಸಹಿಗಳನ್ನು ನಿ.ಡಿ-3(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ತಾಯಿಯ ಸಹಿಯನ್ನು ನೋಡಿ ಗುರುತಿಸಿದ್ದು, ನಿ.ಡಿ-3(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿದಾರರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಡಿ-3(ಸಿ) ಮತ್ತು ನಿ.ಡಿ-3(ಡಿ) ಎಂದು ಗುರುತಿಸಲಾಗಿದೆ. ಪತ್ರಗಾರರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-3(ಎಫ್) ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದಾರೆ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**